# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1146

ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ
(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 13.03.2026

ಉತ್ತರಿಸುವ ಸಚಿವರು : ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| ಅ) | ಕಾಯ್ದೆಯಲ್ಲಿ ನಾಮಫಲಕಗಳ ಒಟ್ಟಾರೆ ವಿಸ್ತೀರ್ಣದಲ್ಲಿ ಕನ್ನಡ ಭಾಷೆಯನ್ನು ಮೇಲ್ಭಾಗದಲ್ಲಿ ಶೇ. 60 ರಷ್ಟು ಪ್ರದರ್ಶಿಸಲು ಹಾಗೂ ಕೆಳಭಾಗದಲ್ಲಿ ಶೇ 40 ರಷ್ಟು ಇತರೆ ಭಾಷೆಗಳನ್ನು ಬಳಸಲು ಅವಕಾಶ ಕಲ್ಪಿಸಲಾಗಿದೆ; ಹಾಗಿದ್ದರೆ ಇತರೆ ಭಾಷೆ ಎಂದರೆ ಯಾವ ಭಾಷೆಗಳು: (ವಿವರ ನೀಡುವುದು) | ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022ರ 17ನೇ ಪ್ರಕರಣದಲ್ಲಿನ 6ನೇ ಉಪಪಕರಣದಲ್ಲಿ ಯಾವುದೇ ಸಂಸ್ಥೆಗಳು ತಮ್ಮ ನಾಮಫಲಕಗಳಲ್ಲಿ ಕನ್ನಡ ಭಾಷೆಯನ್ನು ಶೇ. 60 ರಷ್ಟು ಪ್ರದರ್ಶಿಸಲಾಗಿದೆ ಮತ್ತು ಕನ್ನಡ ಭಾಷೆಯು ನಾಮಫಲಕದ ಮೇಲ್ಭಾಗದಲ್ಲಿ ಪ್ರದರ್ಶಿತವಾಗಿದೆ ಎಂಬುದನ್ನು ಖಚಿತಪಡಿಸಿ ಕೊಳ್ಳತಕ್ಕದು ಎಂದಿರುತ್ತದೆ. ಮತ್ತು ಕೆಳಗಿನ ಅರ್ಧ ಭಾಗವು ಬೇರೆ ಯಾವುದೇ ಭಾಷೆಯಲ್ಲಿ ಇರಬಹುದು ಎಂದು ಸಹ ತಿಳಿಸಿರುತ್ತದೆ.<br><br>ಅದರಂತೆ ನಾಮಫಲಕದ ಕೆಳಭಾಗದಲ್ಲಿ ಮಾಲೀಕರು ಯಾವುದೇ ಭಾಷೆಯನ್ನು ಶೇ. 40ರ ಪ್ರಾತಿನಿಧ್ಯ ಮೀರದಂತೆ ಪ್ರದರ್ಶಿಸಬಹುದಾಗಿರುತ್ತದೆ. |
| (ಆ) | ನಾಮಫಲಕಗಳಲ್ಲಿ ಕನ್ನಡ ಭಾಷೆಯನ್ನು ಪ್ರಧಾನವಾಗಿ ಬಳಸದ ಎಷ್ಟು ವಾಣಿಜ್ಯ ಮಳಿಗೆಗಳು, ಉದ್ದಿಮೆಗಳ ಮತ್ತು ಸಂಸ್ಥೆಗಳಿಗೆ ಈವರೆವಿಗೂ ದಂಡ ವಿಧಿಸಲಾಗಿದೆ ಮತ್ತು ಪರವಾನಗಿ ರದ್ದುಪಡಿಸಲಾಗಿದೆ: (ವಿವರ ನೀಡುವುದು) | ಇಲ್ಲಿಯವರೆಗೆ ಈ ರೀತಿಯ ದಂಡ ವಿಧಿಸಿದ/ಪರವಾನಿಗೆ ರದ್ದುಪಡಿಸಿದ ಪ್ರಕರಣಗಳು ವರದಿಯಾಗಿರುವುದಿಲ್ಲ. |
| ಇ) | ಕನ್ನಡ ನಾಮಫಲಕ ಅಳವಡಿಸಿರುವುದನ್ನು ಖಾತರಿ ಪಡಿಸಿಕೊಳ್ಳುವಲ್ಲಿ ಜಾರಿ ದಳಗಳು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯ; ಇದ್ದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಿಸಲು ಸರ್ಕಾರದ ಕ್ರಮಗಳೇನು: | ಈ ರೀತಿಯ ಯಾವುದೇ ಪ್ರಕರಣಗಳು ಸರ್ಕಾರದ ಗಮನದಲ್ಲಿ ಇರುವುದಿಲ್ಲ.<br><br>ದಿನಾಂಕ:11.02.2026 ರಂದು ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022ರ ಸಮರ್ಪಕ ಅನುಷ್ಠಾನಕ್ಕೆ ಈ ಕೆಳಕಂಡಂತೆ ನಿರ್ದೇಶನವನ್ನು ನೀಡಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ)<br><br>"ಎಲ್ಲಾ ಸಹಾಯಕ ನಿರ್ದೇಶಕರುಗಳು ಕಾಯಿದೆಯ ಈ ಪ್ರಕರಣದ ಸಮರ್ಪಕ ಅನುಷ್ಠಾನಕ್ಕೆ ಅತ್ಯಂತ ಬದ್ಧತೆಯಿಂದ ಕಾರ್ಯ ನಿರ್ವಹಿಸಬೇಕಾಗುತ್ತದೆ. ಯಾವುದೇ ಸಂದರ್ಭದಲ್ಲಿಯೂ ಮಾಹಿತಿಯನ್ನು ಹೊಂದಿರಬೇಕಾದ್ದು ಅತ್ಯಂತ ಪ್ರಮುಖ ಅಂಶವಾಗಿರುತ್ತದೆ. ಇನ್ನು ಮುಂದೆ ಈ ಬಗ್ಗೆ ಯಾವ ಸಂದರ್ಭದಲ್ಲಿ ಮಾಹಿತಿಯನ್ನು ಅಪೇಕ್ಷಿಸಿದರು ಸಹ |

| | | |
|---|---|---|
| | | ತಕ್ಷಣವೇ ಇದನ್ನು ಒದಗಿಸಬೇಕಾದ್ದು ಸಹಾಯಕ ನಿರ್ದೇಶಕರ ಜವಾಬ್ದಾರಿಯಾಗಿರುತ್ತದೆ. ಕೂಡಲೇ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಅಧಿಕೃತ ಭಾಷಾ ಜಾರಿ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಎಲ್ಲ ಸಹಾಯಕ ನಿರ್ದೇಶಕರುಗಳ ಸಭೆಯನ್ನು ಕರೆದು ಒಟ್ಟಾರೆ 2022ರ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮದ ಸಮರ್ಪಕ ಅನುಷ್ಠಾನದ ಕುರಿತಂತೆ ಒಂದು ದಿನದ ಕಾರ್ಯಾಗಾರವನ್ನು ನಡೆಸಿ ಅವರುಗಳ ಜವಾಬ್ದಾರಿಗಳನ್ನು ನಿಗದಿಪಡಿಸುವುದಲ್ಲದೇ, ಕಾಯಿದೆಯ ಪರಿಣಾಮಕಾರಿ ಅನುಷ್ಠಾನವನ್ನು ಅನುಪಾಲಿಸಲು ಸೂಚಿಸಲಾಯಿತು". |
| ಈ) | ನಾಮಫಲಕದಲ್ಲಿ ಕನ್ನಡ ಬಳಸಲು ತೊಂದರೆ ಇದೆ ಎಂದು 'ಸಹಾಯವಾಣಿ' ಮೂಲಕ ನೆರವು ಪಡೆದವರ ಸಂಖ್ಯೆ (ಸ್ವೀಕೃತ ಕರೆಗಳ ಸಂಖ್ಯೆ) ಎಷ್ಟು? | ಈ ರೀತಿಯ ಸಹಾಯವಾಣಿಯನ್ನು ತೆರೆದಿರುವುದಿಲ್ಲ. |

ಸಂಖ್ಯೆ: ಕಸಂವಾ 23 ಕೆಬಿಎಲ್ ಆಕ 2026

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರ್ಕಾರ

**ಕನ್ನಡ ಅಭಿವೃದ್ಧಿ ಪ್ರಾಧಿಕಾರ**
**ವಿಧಾನಸೌಧ, ಬೆಂಗಳೂರು**

ದಿನಾಂಕ:11/02/2026 ರಂದು **ಅಪರಾಹ್ನ** 3 ಗಂಟೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀ ಶಿವರಾಜ ತಂಗಡಗಿ ಅವರ ಅಧ್ಯಕ್ಷತೆಯಲ್ಲಿ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ-2022ರ ಸಮರ್ಪಕ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೊ.ಸಂ.123, ಮೊದಲನೇ ಮಹಡಿ, ವಿಕಾಸಸೌಧ ಇಲ್ಲಿ ನಡೆದ ರಾಜ್ಯಸಮಿತಿ ಸಭೆಯ ನಡವಳಿಗಳು:

---

:ಸಭೆಯಲ್ಲಿ ಹಾಜರಿದ್ದವರು:

1. **ಶ್ರೀ ಶಿವರಾಜ್ ಎಸ್ ತಂಗಡಗಿ**, ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು
2. **ಡಾ. ಪುರುಷೋತ್ತಮ ಬಿಳಿಮಲೆ**, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ
3. **ಶ್ರೀ ಹೆ. ಮಂಜುನಾಥ್**, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು
4. **ಶ್ರೀಮತಿ ಕೆ.ಎಂ.ಗಾಯತ್ರಿ**, ಭಾ.ಆ.ಸೇ., ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.
5. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಇವರ ಪರವಾಗಿ **ಶ್ರೀಮತಿ ಪಲ್ಲವಿ ಅಕ್ಕುರಾತಿ, ಭಾ.ಆ.ಸೇ., ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ವಿಶೇಷಾಧಿಕಾರಿ, ಕರ್ನಾಟಕ ಸರ್ಕಾರ**
6. ಸರ್ಕಾರದ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಇವರ ಪರವಾಗಿ **ಶ್ರೀ ಕೆ.ಎನ್. ಮೂರ್ತಿ, ಉಪ ಕಾರ್ಯದರ್ಶಿ** (ಆಡಳಿತ), ಸಿಬ್ಬಂದಿ ಮತ್ತು **ಆಡಳಿತ ಸುಧಾರಣೆ ಇಲಾಖೆ, ಬೆಂಗಳೂರು**
7. ಸರ್ಕಾರದ ಕಾರ್ಯದರ್ಶಿಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಬೆಂಗಳೂರು ಪರವಾಗಿ **ಶ್ರೀ ಜನಾರ್ಧನ ಡಿ.ಬಿ., ಪದನಿಮಿತ್ತ ಜಂಟಿ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಬೆಂಗಳೂರು**
8. ಸರ್ಕಾರದ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಕನ್ನಡ) ಇವರ ಪರವಾಗಿ **ಡಾ. ಪುಷ್ಪಾ ಮುದಲಿಂಗಮ್ಮನವರ, ಯೋಜನಾ ನಿರ್ದೇಶಕರು, ಇ-ಕನ್ನಡ ಯೋಜನೆ, ಆಡಳಿತ ಮತ್ತು ಸಿಬ್ಬಂದಿ ಸುಧಾರಣಾ ಇಲಾಖೆ (ಇ-ಆಡಳಿತ), ಬೆಂಗಳೂರು**
9. ಸರ್ಕಾರದ ಕಾರ್ಯದರ್ಶಿಗಳು (ವೆಚ್ಚ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು. ಪರವಾಗಿ **ಶ್ರೀಮತಿ ಅಪರ್ಣಾ ಪಾವಟೆ, ಅಪರ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು.**

10. ಸರ್ಕಾರದ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಇವರ ಪರವಾಗಿ ಶ್ರೀ ಶಿವಕುಮಾರ್ ಎಚ್.ಸಿ., ಉಪ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಬೆಂಗಳೂರು
11. ಶ್ರೀ ಸುರೇಶ್ ಬಾಬು, ಉಪ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಆಡಳಿತ ಕನ್ನಡ), ಬೆಂಗಳೂರು
12. ಶ್ರೀಮತಿ ಶುಭಶ್ರೀ ಕೆ.ಎಂ, ಸರ್ಕಾರದ ಅಧೀನ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಆಡಳಿತ ಕನ್ನಡ), ಬೆಂಗಳೂರು
13. ಡಾ.ಸಂತೋಷ ಹಾನಗಲ್ಲ, ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ರಾಜ್ಯಮಟ್ಟದ ಸಮಿತಿಯ ಸಂಚಾಲಕರು.

<u>ಗೈರು ಹಾಜರಿ:-</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ

ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ 2022ರ 7ನೇಯ ಪ್ರಕರಣದ ಅನುಸಾರ ಈ ಕಾಯ್ದೆಯ ಸಮರ್ಪಕ ಅನುಷ್ಠಾನದ ಕುರಿತಂತೆ ಕರೆಯಲಾದ ರಾಜ್ಯ ಸಮಿತಿ ಸಭೆಯ ಉದ್ದೇಶವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಹಾಗೂ ರಾಜ್ಯ ಸಮಿತಿಯ ಸಂಚಾಲಕರಾದ ಡಾ. ಸಂತೋಷ ಹಾನಗಲ್ಲ ವಿವರಿಸಿ, ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿದರು.

ನಂತರ ರಾಜ್ಯ ಸಮಿತಿ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀ ಶಿವರಾಜ ತಂಗಡಗಿಯವರು ಕಾಯ್ದೆಯ ತ್ವರಿತ ಮತ್ತು ಸಮರ್ಪಕ ಅನುಷ್ಠಾನಕ್ಕಾಗಿ ಆದ್ಯತೆಯ ಕ್ರಮವನ್ನು ವಹಿಸಬೇಕಾಗಿದ್ದು, ವಿವಿಧ ಇಲಾಖೆಗಳು ಉತ್ತಮ ಸಂವಹನದೊಂದಿಗೆ ಈ ಜವಾಬ್ದಾರಿಯನ್ನು ನಿರ್ವಹಿಸಬೇಕೆಂದರು.

ವಿವಿಧ ಇಲಾಖೆಗಳು ಕೈಗೊಳ್ಳಬೇಕಾದ ತುರ್ತು ಕ್ರಮಗಳ ಕುರಿತಂತೆ ವಿಷದಪಡಿಸುವ ಸಲುವಾಗಿ ರಾಜ್ಯ ಸಮಿತಿ ಸಭೆಯನ್ನು ಆಯೋಜಿಸಲಾಗಿದ್ದು, ಸಭೆಯಲ್ಲಿ ನೀಡಲಾದ ಸೂಚನೆಗಳನುಸಾರ ಸಂಬಂಧಪಟ್ಟ ಇಲಾಖೆಗಳು ಜವಾಬ್ದಾರಿಯುತವಾಗಿ ಮುನ್ನಡೆಯಬೇಕಾಗುತ್ತದೆ ಎಂದು ತಿಳಿಸಿದರು.

<u>ನಂತರ ಕೆಳಗೆ ವಿವರಿಸಲಾದಂತೆ ಪ್ರಕರಣವಾರು ಸೂಚನೆಗಳನ್ನು ನೀಡಿದರು.</u>

1. ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದ ಜಾರಿ ಅಧಿಕಾರಿಗಳು ಅಧಿನಿಯಮದ ಪ್ರಕರಣ 17 ರಲ್ಲಿ ವಿಧಿಸಲಾಗಿರುವ ಉಪಪ್ರಕರಣಗಳ ಪಾಲನೆ / ಪರಿಶೀಲನೆಯನ್ನು ಕೈಗೊಳ್ಳುವ ಸ್ವನಿಯಂತ್ರಣ ವ್ಯವಸ್ಥೆ ರೂಪುಗೊಳ್ಳಬೇಕಾಗಿರುತ್ತದೆ.
ತಾಲ್ಲೂಕು ಮಟ್ಟದ ಸಮಿತಿಗಳು, ಜಿಲ್ಲಾ ಮಟ್ಟದ ಸಮಿತಿಗಳು ಕಾಲಕಾಲಕ್ಕೆ ಸಭೆ ನಡೆಸಿ ಕನ್ನಡ ಭಾಷೆಯ ಅನುಷ್ಠಾನಕ್ಕೆ ಕೈಗೊಂಡಿರುವ ಕ್ರಮಗಳ ಪರಾಮರ್ಶೆ ಮಾಡಬೇಕಾಗಿರುತ್ತದೆ. ಜಿಲ್ಲೆ, ತಾಲ್ಲೂಕು ಮಟ್ಟದ ಸಮಿತಿಗಳು ಸಕ್ರಿಯವಾಗಿ ಕಾರ್ಯ ನಿರ್ವಹಿಸಬೇಕಾದಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಜವಾಬ್ದಾರಿ ಮಹತ್ವದ್ದಾಗಿದ್ದು, ಅಧಿನಿಯಮದ 8ನೇ

ಪ್ರಕರಣದ ಉಪಪ್ರಕರಣ (2) ರಲ್ಲಿ ಈ ಮಹತ್ವದ ಜವಾಬ್ದಾರಿಯನ್ನು ನಿಗದಿ ಪಡಿಸಲಾಗಿರುತ್ತದೆ. ಅಧಿನಿಯಮ ಪ್ರಕರಣ 9(ಎ) ರಂತೆ ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಜಿಲ್ಲಾಮಟ್ಟದ ಜಾರಿ ಅಧಿಕಾರಿಯಾಗಿರುತ್ತಾರೆ ಮತ್ತು ಪ್ರಕರಣ 8 (2)ರನ್ವಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರೇ ತಾಲೂಕು ಮತ್ತು ಜಿಲ್ಲಾ ಮಟ್ಟಗಳ ಸಮಿತಿಗಳೊಂದಿಗೆ ಸಮನ್ವಯ ಸಾಧಿಸಿ ಸಭೆಗಳನ್ನು ಆಯೋಜಿಸುವುದು ಮತ್ತು ವರದಿಗಳನ್ನು ನಿಗದಿತ ಸಮಯದೊಳಗೆ ರಾಜ್ಯಮಟ್ಟದ ಸಮಿತಿಗೆ ಸಲ್ಲಿಸುವುದನ್ನು ಖಚಿತಪಡಿಸಿಕೊಳ್ಳಬೇಕಾಗುತ್ತದೆ ಎನ್ನುವ ಅಂಶವನ್ನು ಸಭೆಯ ಗಮನಕ್ಕೆ ತಂದು ಕೆಳಕಂಡ ನಿರ್ದೇಶನವನ್ನು ನೀಡಲಾಯಿತು.

**ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲಾ ಸಹಾಯಕ ನಿರ್ದೇಶಕರುಗಳು ತಮ್ಮ ಮಹತ್ವದ ಜವಾಬ್ದಾರಿಯನ್ನು ಅರ್ಥೈಸಿಕೊಂಡು ಜಿಲ್ಲಾಡಳಿತದ ಸಂಪೂರ್ಣ ಸಹಕಾರದೊಂದಿಗೆ ಅಧಿನಿಯಮದ ಪ್ರಕರಣ 17 ರಲ್ಲಿ ವಿಧಿಸಲಾಗಿರುವ ಉಪಪ್ರಕರಣಗಳ ಪಾಲನೆಗೆ ಕ್ರಮವಹಿಸಬೇಕಾಗುತ್ತದೆ. ಅಧಿನಿಯಮದನುಸಾರ ಪ್ರತಿ ಮೂರು ತಿಂಗಳಿಗೊಮ್ಮೆ ಜಾರಿ ಪ್ರಾಧಿಕಾರದ ಸಭೆಯನ್ನು ನಡೆಸಿ ಅನುಪಾಲಿಸುವುದು ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಹಾಯಕ ನಿರ್ದೇಶಕರ ಜವಾಬ್ದಾರಿಯಾಗಿರುತ್ತದೆ. ಇನ್ನು ಮುಂದೆ ಪ್ರತಿ ಮೂರು ತಿಂಗಳಿಗೊಮ್ಮೆ ಈ ಪ್ರಕರಣದ ಪ್ರಗತಿ ವರದಿಯನ್ನು ರಾಜ್ಯದ ಎಲ್ಲಾ ಸಹಾಯಕ ನಿರ್ದೇಶಕರುಗಳು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ವಿಫಲವಾದಲ್ಲಿ ಶಿಸ್ತಿನ ಕ್ರಮಕ್ಕೆ ಮುಂದಾಗಬೇಕಾಗುತ್ತದೆ ಎನ್ನುವ ನಿರ್ದೇಶನವನ್ನು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವರು ಕೂಡಲೇ ಹೊರಡಿಸಲು ಸೂಚಿಸಲಾಯಿತು.**

2. ಅಧಿನಿಯಮದ ಪ್ರಕರಣ (11) ರಂತೆ ಕನ್ನಡ ಸಂಸ್ಕೃತಿ ನಿರ್ದೇಶನಾಲಯವು ಅಧಿಕೃತ ಭಾಷಾ ಜಾರಿ ನಿರ್ದೇಶನಾಲಯವಾಗಬೇಕಿದ್ದು, ನಿರ್ದೇಶನಾಲಯದಲ್ಲಿ ಈ ಕಾಯಿದೆಯ ಅನುಷ್ಠಾನ ಮೇಲುಸ್ತುವಾರಿ ಕುರಿತಂತೆ ಒಬ್ಬ ಹಿರಿಯ ಅಧಿಕಾರಿ, ಸಿಬ್ಬಂದಿ ಒಳಗೊಂಡ ವಿಭಾಗ ರಚನೆಯಾಗಬೇಕಾಗುತ್ತದೆ ಎನ್ನುವ ಅಂಶವನ್ನು ಚರ್ಚಿಸಿ ಕೆಳಕಂಡ ನಿರ್ದೇಶನವನ್ನು ನೀಡಲಾಯಿತು.

**ಕೂಡಲೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ತಮ್ಮ ಕಚೇರಿಯಲ್ಲಿ ಕಾಯಿದೆಯ ಅನುಷ್ಠಾನ ಮೇಲುಸ್ತುವಾರಿ ಕುರಿತಂತೆ ಒಬ್ಬ ಹಿರಿಯ ಅಧಿಕಾರಿಗೆ ಜವಾಬ್ದಾರಿಯನ್ನು ನೀಡುವುದು. ಇದಕ್ಕಾಗಿ ಕೆಲವು ಸಿಬ್ಬಂದಿಗಳನ್ನು ನಿಯೋಜಿಸುವುದು.**

3. ಅಧಿನಿಯಮದ ಪ್ರಕರಣ (5) ರನುಸಾರ ಭಾಷಾಂತರ ಇಲಾಖೆಯು ರಾಜಭಾಷಾ ಆಯೋಗವನ್ನು ಹೊಂದಿರಬೇಕಾಗುತ್ತದೆ. ಈ ಪ್ರಕರಣದಲ್ಲಿ ವಿವರಿಸಲಾದಂತೆ ಸಂಸದೀಯ ವ್ಯವಹಾರ ಮತ್ತು ಶಾಸನ ರಚನಾ ಇಲಾಖೆ 4 ಜನ ಸದಸ್ಯರನ್ನು ಒಳಗೊಂಡ ರಾಜಭಾಷಾ ಆಯೋಗವನ್ನು ರಚಿಸಿ, ಪ್ರಕರಣ (6) ರಲ್ಲಿ ವಿವರಿಸಲಾದ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಸಂಸದೀಯ ವ್ಯವಹಾರಗಳ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಿ ಅಧಿಕೃತ ರಾಜಭಾಷಾ

ಆಯೋಗ ಸ್ಥಾಪನೆಗೆ ಕ್ರಮ ವಹಿಸಲು ಸೂಚಿಸಬೇಕಾಗಿರುತ್ತದೆ ಎನ್ನುವ ಅಂಶವನ್ನು ಚರ್ಚಿಸಿ ಕೆಳಕಂಡ ನಿರ್ದೇಶನವನ್ನು ನೀಡಲಾಯಿತು.

**ಆರ್ಥಿಕ ಇಲಾಖೆಯಲ್ಲಿ ಇರುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆ ಅಧಿಕಾರಿಗಳು ಕೂಡಲೇ ಇತ್ಯರ್ಥಪಡಿಸುವುದು. ಪ್ರಸ್ತಾವನೆಯನ್ನು ಸೂಕ್ತ ರೀತಿಯಲ್ಲಿ ಆದ್ಯತೆಯ ಮೇರೆಗೆ ಹಿಂಬಾಲಿಸಿ ಸಂಸದೀಯ ವ್ಯವಹಾರಗಳ ಇಲಾಖೆ ರಾಜಭಾಷಾ ಆಯೋಗದ ನೇಮಕಾತಿಗೆ ಕ್ರಮವಹಿಸುವುದು. ಈಗಾಗಲೇ 2016 ರಲ್ಲಿ (ದಿನಾಂಕ 23.06.2016) ನೇಮಕಗೊಂಡಿರುವ ಸಮಿತಿಯನ್ನು ಸ್ಥಗಿತಗೊಳಿಸಿ 2022ರ ಕಾಯಿದೆಯ ಅನುಸಾರ ಈ ಸಮಿತಿಯು ನಿರ್ವಹಿಸಬೇಕಾದ ಜವಾಬ್ದಾರಿಗಳನ್ನು ನಿಗದಿಪಡಿಸುವುದು. ಸಮಿತಿಗೆ ಸದಸ್ಯರ ಹೆಸರುಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರೊಂದಿಗೆ ಸಂಸದೀಯ ವ್ಯವಹಾರಗಳ ಇಲಾಖಾಧಿಕಾರಿಗಳು ಚರ್ಚಿಸಿ ಅಂತಿಮಗೊಳಿಸುವುದು.**

4. ಅಧಿನಿಯಮದ 18ನೇ ಪ್ರಕರಣದಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡ ಭಾಷೆಯ ಬಳಕೆಗಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ವಿವರಿಸಲಾಗಿದೆ. ಇ-ಆಡಳಿತ ಇಲಾಖೆಯು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡ ಭಾಷೆಯ ಸಮರ್ಪಕ ಬಳಕೆಗಾಗಿ ಮುಕ್ತ ಮೂಲ ತಂತ್ರಾಂಶ ಅಭಿವೃದ್ಧಿ ಪಡಿಸುವುದು. ಸರ್ಕಾರದ ವಿವಿಧ ಇಲಾಖೆಗಳು, ಪ್ರಾಧಿಕಾರಗಳು, ಉದ್ದಿಮೆಗಳು, ಸ್ವಾಯತ್ತ ಸಂಸ್ಥೆಗಳು, ಸಹಕಾರ ಸಂಘಗಳು ಇತ್ಯಾದಿಗಳ ಜಾಲತಾಣದಲ್ಲಿ ಮಾಹಿತಿಯನ್ನು ಕನ್ನಡದಲ್ಲಿಯೂ ಲಭ್ಯವಾಗುವಂತೆ ನೋಡಿಕೊಳ್ಳುವುದು. ಇ-ಟೆಂಡರ್ ಮತ್ತು ಇ-ಆಡಳಿತ ಯೋಜನೆಗಳಲ್ಲಿ ಕನ್ನಡ ಬಳಕೆಗೆ ಸೌಲಭ್ಯ ಕಲ್ಪಿಸುವುದು ಸೇರಿದಂತೆ ಈ ಪ್ರಕರಣದಲ್ಲಿರುವ ಎಲ್ಲಾ ಅಂಶಗಳನ್ನು ಇ-ಆಡಳಿತ ಇಲಾಖೆಯು ಅನುಷ್ಠಾನ ಮಾಡಬೇಕಿದ್ದು, ಮುಕ್ತ, ಮೂಲ ತಂತ್ರಾಂಶಗಳ ಪರಿಕರಗಳನ್ನು ಸಹ ಅಭಿವೃದ್ಧಿ ಪಡಿಸಬೇಕಾಗಿರುತ್ತದೆ. ಅಂತೆಯೇ 19ನೇ ಪ್ರಕರಣದಲ್ಲಿ ಇ-ಆಡಳಿತ ಇಲಾಖೆಯಿಂದ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡ ಭಾಷೆಯ ಪರಿಣಾಮಕಾರಿ ಅಭಿವೃದ್ಧಿಗಾಗಿ ಸರ್ಕಾರಕ್ಕೆ ಸೃಜನಾತ್ಮಕ ಸಲಹೆಗಳನ್ನು ನೀಡುವ ವ್ಯಕ್ತಿಗಳಿಗೆ ಪ್ರೋತ್ಸಾಹವನ್ನು ನೀಡಲು ಯೋಜನೆಯನ್ನು ಸಹ ರೂಪಿಸಬೇಕಾಗುತ್ತದೆ ಎನ್ನುವ ಅಂಶವನ್ನು ಚರ್ಚಿಸಿ ಕೆಳಕಂಡ ನಿರ್ದೇಶನವನ್ನು ನೀಡಲಾಯಿತು.

**ಇ-ಆಡಳಿತ ಇಲಾಖೆಯ ಅಧಿಕಾರಿಗಳು ಈ ಬಗ್ಗೆ ಕೂಡಲೇ ಕಾರ್ಯಪ್ರವೃತ್ತರಾಗಬೇಕು. ತಂತ್ರಜ್ಞಾನದಲ್ಲಿ ಕನ್ನಡ ಭಾಷೆಯ ಪರಿಣಾಮಕಾರಿ ಅಭಿವೃದ್ಧಿಗಾಗಿ ವಿಶೇಷ ಯೋಜನೆಗಳನ್ನು ರೂಪಿಸಬೇಕು. ಕಾಯಿದೆಯ 18 ಮತ್ತು 19 ರ ಪ್ರಕರಣಗಳನುಸಾರ ಉದ್ದೇಶಿತ ಕಾರ್ಯಕ್ರಮಗಳನ್ನು ರೂಪಿಸಿ ಪ್ರಗತಿಯನ್ನು ಶೀಘ್ರದಲ್ಲಿ ಸಲ್ಲಿಸಬೇಕು.**
**ಧ್ವನಿಯಿಂದ ಪಠ್ಯ (ವಾಯ್ಸ್ ಟು ಟೆಕ್ಸ್ಟ್) ತಂತ್ರಾಂಶವನ್ನು ಸಹ ಸಮರ್ಪಕವಾಗಿ ಅಭಿವೃದ್ಧಿಪಡಿಸಬೇಕು.**

5. ಕಾಯಿದೆ ಪ್ರಕರಣ 20 ರಲ್ಲಿನ ಅಂಶಗಳನ್ನು ಪಾಲಿಸುವುದನ್ನು ಆರ್ಥಿಕ ಇಲಾಖೆ ಮತ್ತು ವಾಣಿಜ್ಯ ಕೈಗಾರಿಕಾ ಇಲಾಖೆಗಳು ಖಚಿತಪಡಿಸಿಕೊಳ್ಳಬೇಕಾಗುತ್ತದೆ ಎನ್ನುವ ಅಂಶವನ್ನು ಚರ್ಚಿಸಲಾಯಿತು. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ನಿರ್ವಹಿಸಬೇಕಾದ ಕ್ರಮಗಳ ಕುರಿತಂತೆ ಕರಡು

ನಿಯಮಗಳಲ್ಲಿ ವಿವರಣೆ. ನಿಯಮಗಳ ಪ್ರಸ್ತಾವನೆ ಸರ್ಕಾರದ ಹಂತದಲ್ಲಿರುತ್ತದೆ ಎನ್ನುವ ಅಂಶವನ್ನು ಸಭೆಯು ಅವಲೋಕಿಸಿತು. ಕೆಳಕಂಡ ನಿರ್ದೇಶನಗಳನ್ನು ನೀಡಲಾಯಿತು.

**(ಅ) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಧಿಕಾರಿಗಳು ಕಾಯಿದೆ ಪ್ರಕರಣ 20 ರಲ್ಲಿನ ಅಂಶಗಳನ್ನು ಪಾಲಿಸುವಲ್ಲಿ ಕೂಡಲೇ ಪ್ರಸ್ತಾವನೆಯನ್ನು ಸಲ್ಲಿಸಿ ಸಂಬಂಧಪಟ್ಟವರ ಅನುಮೋದನೆಯನ್ನು ಪಡೆಯುವುದು. ಇದಕ್ಕೆ ಪೂರ್ವಭಾವಿಯಾಗಿ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಇವರೊಂದಿಗೆ ಕೈಗಾರಿಕಾ ಇಲಾಖೆ ಮತ್ತು ಕಾರ್ಮಿಕ ಇಲಾಖೆಯ ಅಧಿಕಾರಿಗಳು ಚರ್ಚಿಸಿ ನಿರ್ವಹಿಸಬೇಕಾದ ಕ್ರಮಗಳನ್ನು ವರದಿಯ ರೂಪದಲ್ಲಿ ಮಾನ್ಯ ಸಚಿವರಿಗೆ ಹಾಗೂ ಸಮಿತಿಯ ಸಂಚಾಲಕರಿಗೆ ಸಲ್ಲಿಸುವುದು**

**(ಆ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳು ಕೂಡಲೇ ಕಾಯಿದೆಗೆ ಪ್ರಸ್ತಾಪಿಸಿರುವ ನಿಯಮಗಳನ್ನು ಅಂತಿಮಗೊಳಿಸುವುದು. ಅಲ್ಲದೇ ಮೂಲ ಕಾಯಿದೆಗೆ ತಿದ್ದುಪಡಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪ್ರಸ್ತಾಪಿಸಿದ್ದು, ಇದನ್ನು ಸಹ ಮುಂದಿನ ಅಧಿವೇಶನಕ್ಕೆ ಮಂಡಿಸಿ ಅನುಮೋದನೆ ಪಡೆಯುವುದು. ಪ್ರಸ್ತುತ ಕಾಯಿದೆ ತಿದ್ದುಪಡಿ ಕುರಿತಾದ ಕಡತವು ಸಂಸದೀಯ ವ್ಯವಹಾರಗಳ ಸಚಿವರ ಲಾಗಿನ್ ನಲ್ಲಿದ್ದು, ಇದನ್ನು ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳು ಹಿಂಬಾಲಿಸುವುದು.**

6. ಕಾಯಿದೆಯ ಪ್ರಕರಣ 21 ರಲ್ಲಿ ರಾಜ್ಯ ಸರ್ಕಾರವು ಸರ್ಕಾರಿ ಕಚೇರಿ, ಸಂಸ್ಥೆ, ಸ್ಥಳೀಯ ಪ್ರಾಧಿಕಾರ, ಖಾಸಗಿ ಕೈಗಾರಿಕೆ ಸಂಸ್ಥೆಗಳ ಮತ್ತು ಅವುಗಳ ಕರ್ನಾಟಕದಲ್ಲಿನ ನೇಮಕಾತಿ ಏಜೆನ್ಸಿಗಳಿಗಾಗಿ ಒಂದು ಉದ್ಯೋಗ ಪೋರ್ಟಲ್ ಸ್ಥಾಪನೆಗೆ ಕ್ರಮ ವಹಿಸಬೇಕಾಗಿರುತ್ತದೆ. ಇದನ್ನು ಉದ್ಯೋಗ ಮತ್ತು ತರಬೇತಿ ಇಲಾಖೆಯು ನಿರ್ವಹಿಸಬೇಕಾಗಿರುತ್ತದೆ ಎನ್ನುವ ಅಂಶವನ್ನು ಚರ್ಚಿಸಿ ಕೆಳಕಂಡ ನಿರ್ದೇಶನವನ್ನು ನೀಡಲಾಯಿತು.

**ಉದ್ಯೋಗ ಮತ್ತು ತರಬೇತಿ ಇಲಾಖೆಯ ಅಧಿಕಾರಿಗಳು ಸ್ವಯಂಚಾಲಿತವಾದ ವ್ಯವಸ್ಥೆಯನ್ನು ರೂಪಿಸುವ ಕುರಿತಂತೆ ಕೂಡಲೇ ಕ್ರಮಕ್ಕೆ ಮುಂದಾಗುವುದು. ಕೈಗೊಂಡ ಕ್ರಮದ ಬಗ್ಗೆ ಪ್ರಗತಿ ವರದಿಯನ್ನು ಸಮಿತಿಯ ಸಂಚಾಲಕರಿಗೆ ಶೀಘ್ರದಲ್ಲಿ ಸಲ್ಲಿಸುವುದು.**

7. ಕಾಯಿದೆಯ 17ನೇ ಪ್ರಕರಣದ ಉಪಪ್ರಕರಣ (6) ರಂತೆ ವಾಣಿಜ್ಯ, ಕೈಗಾರಿಕೆ, ವ್ಯಾಪಾರ ಸಂಸ್ಥೆ, ನ್ಯಾಸಗಳು, ಸಮಾಲೋಚನಾ ಕೇಂದ್ರಗಳು, ಮನೋರಂಜನಾ ಕೇಂದ್ರಗಳು ಮುಂತಾದ ವಾಣಿಜ್ಯ ಸಂಸ್ಥೆಯು ತಮ್ಮ ನಾಮಫಲಕಗಳ ಮೇಲಿನ ಶೇ. 60 ರಷ್ಟು ಭಾಗವನ್ನು ಕನ್ನಡದಲ್ಲಿ ಹೊಂದಬೇಕಾಗುತ್ತದೆ. ಇದರ ಪರಾಮರ್ಶೆಯನ್ನು ಜಾರಿ ಅಧಿಕಾರಿಗಳು ನಿರ್ವಹಿಸಬೇಕಾಗಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಈ ಅಂಕಿ ಅಂಶಗಳನ್ನು ಯಾವುದೇ ಸಂದರ್ಭದಲ್ಲಿಯೂ ಹೊಂದಿರಬೇಕಾಗುತ್ತದೆ. ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022 ರ ಸಮರ್ಪಕ ಅನುಷ್ಠಾನಕ್ಕೆ ಆಡಳಿತ ವ್ಯವಸ್ಥೆಯ ವಿವಿಧ ಹಂತಗಳಲ್ಲಿ ಸಮಿತಿ ರಚನೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು

ಹೊಂದಬೇಕಾದ ಹೆಚ್ಚುವರಿ ಜವಾಬ್ದಾರಿಗಳು ಹಾಗೂ ಕಾಯಿದೆಗೆ ನಿಯಮಗಳ ಸಂರಚನೆ ಪ್ರಮುಖವಾಗಿದ್ದು. ಈ ಬಗ್ಗೆ ಸಂಬಂಧಿತರಿಗೆ ಸೂಚನೆಗಳನ್ನು ನೀಡುವಲ್ಲಿ ಅನುಮೋದನೆ ಅವಶ್ಯಕತೆ ಇರುತ್ತದೆ ಎನ್ನುವ ಅಂಶವನ್ನು ಚರ್ಚಿಸಿ ಕೆಳಕಂಡ ನಿರ್ದೇಶನವನ್ನು ನೀಡಲಾಯಿತು.

**ಎಲ್ಲಾ ಸಹಾಯಕ ನಿರ್ದೇಶಕರುಗಳು ಕಾಯಿದೆಯ ಈ ಪ್ರಕರಣದ ಸಮರ್ಪಕ ಅನುಷ್ಠಾನಕ್ಕೆ ಅತ್ಯಂತ ಬದ್ಧತೆಯಿಂದ ಕಾರ್ಯ ನಿರ್ವಹಿಸಬೇಕಾಗುತ್ತದೆ. ಯಾವುದೇ ಸಂದರ್ಭದಲ್ಲಿಯೂ ಮಾಹಿತಿಯನ್ನು ಹೊಂದಿರಬೇಕಾದ್ದು, ಅತ್ಯಂತ ಪ್ರಮುಖ ಅಂಶವಾಗಿರುತ್ತದೆ. ಇನ್ನು ಮುಂದೆ ಈ ಬಗ್ಗೆ ಯಾವ ಸಂದರ್ಭದಲ್ಲಿ ಮಾಹಿತಿಯನ್ನು ಅಪೇಕ್ಷಿಸಿದರು ಸಹ ತಕ್ಷಣವೇ ಇದನ್ನು ಒದಗಿಸಬೇಕಾದ್ದು ಸಹಾಯಕ ನಿರ್ದೇಶಕರ ಜವಾಬ್ದಾರಿಯಾಗಿರುತ್ತದೆ. ಕೂಡಲೇ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಅಧಿಕೃತ ಭಾಷಾ ಜಾರಿ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಎಲ್ಲ ಸಹಾಯಕ ನಿರ್ದೇಶಕರುಗಳ ಸಭೆಯನ್ನು ಕರೆದು ಒಟ್ಟಾರೆ 2022ರ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮದ ಸಮರ್ಪಕ ಅನುಷ್ಠಾನದ ಕುರಿತಂತೆ ಒಂದು ದಿನದ ಕಾರ್ಯಾಗಾರವನ್ನು ನಡೆಸಿ ಅವರುಗಳ ಜವಾಬ್ದಾರಿಗಳನ್ನು ನಿಗದಿಪಡಿಸುವುದಲ್ಲದೇ, ಕಾಯಿದೆಯ ಪರಿಣಾಮಕಾರಿ ಅನುಷ್ಠಾನವನ್ನು ಅನುಪಾಲಿಸಲು ಸೂಚಿಸಲಾಯಿತು.**

ಅಂತಿಮವಾಗಿ ನಾಮಫಲಕಗಳಲ್ಲಿ ಊರಿನ ಹೆಸರುಗಳನ್ನು ಸೇರಿಸುವ ಮೂಲಕ ಕನ್ನಡ ಪದಗಳನ್ನು ಉಳಿಸುವ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಭಿಯಾನದ ಭಾಗವಾಗಿ ನಿರ್ಮಿಸಲಾಗಿರುವ ಕಿರುಚಿತ್ರವನ್ನು ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರಾದ ಶಿವರಾಜ ಎಸ್. ತಂಗಡಗಿ ರವರು ಲೋಕಾರ್ಪಣೆಗೊಳಿಸಿದರು.

ಮುಂದೆ ಯಾವುದೇ ವಿಷಯಗಳು ಚರ್ಚೆಗೆ ಬಾರದ ಹಿನ್ನೆಲೆಯಲ್ಲಿ ಸಭೆಗೆ ವಂದಿಸುವುದರೊಂದಿಗೆ ಮುಕ್ತಾಯಗೊಳಿಸಲಾಯಿತು.

**(ಶಿವರಾಜ್ ಎಸ್ ತಂಗಡಗಿ)**
**ಹಿಂದುಳಿದ ವರ್ಗಗಳ ಕಲ್ಯಾಣ**
**ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು**
**ಮತ್ತು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ**
**ಅಧಿನಿಯಮದ ರಾಜ್ಯಸಮಿತಿಯ**
**ಅಧ್ಯಕ್ಷರು**
**ಶಿವರಾಜ ಎಸ್. ತಂಗಡಗಿ**
**ಹಿಂದುಳಿದ ವರ್ಗಗಳ ಕಲ್ಯಾಣ**
**ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು**